ಇಲಾಖೆಗೆ ಬರುವುದಿಲ್ಲ. ಅದು ನೀರಾವರಿ ಇಲಾಖೆಗೆ ಹೋಗುತ್ತದೆ. ದಯವಿಟ್ಟು ಈ ಪ್ರಶ್ನೆಯನ್ನು ಅವರಿಗೆ ಹಾಕಿದರೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಅಧ್ಯಕ್ಷರೇ ನಾನು ತಮಗೆ ವಿಚಾರ ತಿಳಿಸಲಿಕ್ಕೆ ಬಯಸುತ್ತೇನೆ. ನಾನು ಹಾಕಿರತಕ್ಕಂಥಾದ್ದು ಹುಣಕನಹಳ್ಳಿ ಮತ್ತು ಹೇಮಗಿ ಏತ ನೀರಾವರಿ ಯೋಜನೆಗೆ ಸಂಬಂಧಪಟ್ಟ ಪ್ರಶ್ನೆ ಸಣ್ಣ ನೀರಾವರಿ ಇಲಾಖೆ ಮತಿಯಿಂದ ಅದು ಮಂಜೂರಾಗಿ ಆ ಕಾಮಗಾರಿಯನ್ನು ಸಹ ಸಣ್ಣ ನೀರಾವರಿ ಇಲಾಖೆ ಅದನ್ನು ಅನುಷ್ಠಾನಗೊಳಿಸುತ್ತಿದೆ. ಈ ಏತನೀರಾವರಿ ಕಾಮಗಾರಿ ಪ್ರಾರಂಭವಾಗಿ ಸುಮಾರು 9-10 ವರ್ಷಗಳಾಯಿತು. ಇನ್ನೂ ಕೂಡ ಸಂಪೂರ್ಣವಾಗಿಲ್ಲ. ನನ್ನ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಪ್ರಾರಂಭವಾಗಿರುವ ಹುಳಕನಹಳ್ಳಿ ಮತ್ತು ಹೇಮಗಿ ಈ ಎರಡು ಏತನೀರಾವರಿಗೆ ಸಂಬಂಧಪಟ್ಟ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು.

ಛೇರ್ಮನ್:- ತಾವು ಸಂಬಂಧಪಟ್ಟ ಮಂತ್ರಿಗಳ ಕೊಠಡಿಗೆ ಹೋಗಿ ಕುಳಿತು ಮಾತನಾಡಿದರೆ ಪರಿಹಾರ ಕಂಡುಕೊಳ್ಳಬಹುದು. ಇದು ದೊಡ್ಡ ಸಮಸ್ಯೆ ಏನೂ ಅಲ್ಲ.

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಅಧ್ಯಕ್ಷರೇ, ತಾವೇನು ರೂಲಿಂಗ್ ಕೊಟ್ಟಿರಿ ಅದು ಅತ್ಯಂತ ಸಮರ್ಪಕವಾಗಿದೆ.

ಛೇರ್ಮನ್:- ತಾವು ದಯವಿಟ್ಟು ಅವರ ಕೊಠಡಿಗೆ ಹೋಗಿ. ಆ ಮಂತ್ರಿಯವರು ಸರ್ಜರಿ ಮಾಡುತ್ತಾರೆ.

ಶ್ರೀ ಎಂ.ಎಸ್. ಆತ್ಮಾನಂದ:- ತಾವು ಹೀಗೆ ಹೇಳಿದರೆ ಹೇಗೆ? ನಾನು ರೈತರ ಪರವಾಗಿ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಎಲ್ಲಾ ವಿಚಾರಗಳನ್ನು ಮಂತ್ರಿಗಳ ಕೊಠಡಿಯಲ್ಲಿ ಪ್ರಸ್ತಾಪ ಮಾಡಲಿಕ್ಕಾಗುವುದಿಲ್ಲ. ಈ ವಿಷಯ ಬಹಳ ಗಂಭೀರವಾಗಿರುವುದರಿಂದ ನಾನು ಕಳೆದ 10 ವರ್ಷಗಳಿಂದ ಇದರ ಪೂರ್ಣ ಅನುಷ್ಠಾನಕ್ಕೋಸ್ಕರ ಪ್ರಯತ್ನ ಪಡುತ್ತಿದ್ದೇನೆ. ಈಗ ತಾವು ಆದೇಶ ನೀಡಿದರೆ ತಮ್ಮ ಆದೇಶವನ್ನು ನಾನು ಪಾಲಿಸುತ್ತೇನೆ.

ಛೇರ್ಮನ್:- ತಾವು ಏನೇ ಹೇಳಿದರೂ ಚರ್ಚೆ ಮೂಲಕವೇ ತಾನೇ ನಾವು ತೀರ್ಮಾನ ತೆಗೆದುಕೊಳ್ಳಬೇಕು. Afterall, democracy is for discussion, of discussion and by discussion.

ಶ್ರೀ ಎಂ.ಎಸ್. ಆತ್ಮಾನಂದ:- ನಾಳೆ ಹಾಕಿ.

ಆ) ರಾಜ್ಯದಲ್ಲಿ "ಸೂಪರ್ ಲೋಟೋ" ಲಾಟರಿ ನಡೆಸುತ್ತಿರುವುದರಿಂದ ಲಕ್ಷಾಂತರ ಜನರು ಭಾಗಿಯಾಗಿ, ಆರ್ಥಿಕ ತೊಂದರೆ ಅನುಭವಿಸುತ್ತಿರುವ ಬಗ್ಗೆ.

ಛೇರ್ಮನ್:- ಶ್ರೀಯುತರುಗಳಾದ ಕೆ. ಜಯಪ್ರಕಾಶ್ ಹೆಗಡೆ, ಕೆ.ಬಿ. ಮಲ್ಲಿಕಾರ್ಜುನ ಹಂಪನಗೌಡ ಬಾದರ್ಲಿ, ಮಹಂತೇಶ್ ಎಸ್. ಕೌಜಲಗಿ, ಅಮರೇಗೌಡ ಹಾಗೂ ಇತರರು ಕರ್ನಾಟಕ ರಾಜ್ಯದಲ್ಲಿ ಸೂಪರ್ ಲೋಟೋ ಲಾಟರಿ ಬಗ್ಗೆ ಕಳುಹಿಸಿದ್ದೀರಿ. ಈ ಬಗ್ಗೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ತಾವು ಎಡಗಡೆ ನೋಡಿಕೊಂಡು ಹೇಳಿದರೆ ಬಹಳ ಒಳ್ಳೆಯದು. ತಾವು ಸಾರ್ವಜನಿಕರ ಗಮನ ಸೆಳೆಯುತ್ತಿದ್ದೀರಿ. ಆ ಗಮನ ಸೆಳೆಯುವುದಕ್ಕೆ ಜನ ಇಲ್ಲ ಆದ್ದರಿಂದ.....

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ನಾಳೆ ತೆಗೆದುಕೊಳ್ಳಿ.

ಛೇರ್ಮನ್:- ನಾಳೆ ಅಂತ ಡೇಟ್ ಫಿಕ್ಸ್ ಮಾಡಬೇಡಿ. ನಾಳೆಗೂ ಹೆಚ್ಚು ಬಿಜಿನೆಸ್ ಇದೆ. ನಾಡಿದ್ದು ತೆಗೆದುಕೊಳ್ಳೋಣ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಲಾಟರಿ ಬಗ್ಗೆ ಪ್ರಶ್ನೆ ಕೇಳಿ ನಾವು ಲಾಟರಿ ಹೊಡೆಯುವಂತೆ ಆಗಿದೆ. ನಾವಿಬ್ಬರೂ ನೋಟಿಸ್‌ಕೊಟ್ಟು ಅದು ಕನ್‌ವರ್ಟ್ ಆಗಿ ಈ ಸ್ಥಿತಿಗೆ ಬಂದಿದ್ದೇವೆ. ಆದ್ದರಿಂದ ದಯಮಾಡಿ ತಾವು ಒಂದು ತಾರೀಖಿನ್ನು ಗೊತ್ತುಮಾಡಿ ಎಂಬುದು ನಮ್ಮ ವಿನಂತಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಅಗತ್ಯ ಚರ್ಚೆ ಆಗಬೇಕಾದ ವಿಷಯ.

ಛೇರ್ಮನ್:- ಆಯಿತು ನಾಡಿದ್ದು ತೆಗೆದುಕೊಳ್ಳೋಣ. ಈಗ ಸಾಕಷ್ಟು ಸಮಯವಾಗಿದೆ. ಆದ್ದರಿಂದ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 7.15 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 6ನೇ ಆಗಸ್ಟ್ 2002ರ ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಹನ್ನೊಂದನೇ ವಿಧಾನಸಭೆ

ಐದನೇ ಅಧಿವೇಶನ

ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ)

ವಿಧೇಯಕ, 2002

(2002ರ ವಿಧಾನಸಭೆಯ ಖಾಸಗಿ ಸದಸ್ಯರ ವಿಧೇಯಕ ಸಂಖ್ಯೆ 1)

ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ನ್ನು (1959ರ ಕರ್ನಾಟಕ ಅಧಿನಿಯಮ 11) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ: (1) ಈ ಅಧಿನಿಯಮವನ್ನು ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ, 2002 ಎಂದು ಕರೆಯತಕ್ಕದ್ದು.

(2) ಇದು ತಕ್ಷಣದಿಂದ ಜಾರಿಗೆ ಬರತಕ್ಕದ್ದು.

2. 29(ಎಫ್) ಪ್ರಕರಣದ ತಿದ್ದುಪಡಿ:- ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 11) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 29(ಎಫ್) ಪ್ರಕರಣದಲ್ಲಿ, (9)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-